**<u>ಸಾಕ್ಷಿಯನ್ನು ದಿನಾಂಕಃ 22.11.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಎಸ್. ವಕೀಲರಿಂದ</u>**

ನಿಪಿ3 ರ ನೊಟೀಸ್ ಅನ್ನು ಪ್ರತಿವಾದಿಗೆ ಕೊಡುವ ಮೊದಲು ನಿಪಿ1 ಮತ್ತು 2 ನನ್ನ ಬಳಿ ಇರುತ್ತದೆ. ನಿಪಿ3 ರ ನೊಟೀಸ್ ನಲ್ಲಿ ಪ್ರತಿವಾದಿಗಳೇ ಸಾಲ ಪಡೆದುಕೊಂಡಿರುತ್ತೇನೆಂದು ಬರೆದಿರುತ್ತೇನೆಂದರೆ ಸರಿಯಲ್ಲ. ನಿಪಿ3 ರ ನೊಟೀಸ್ ನಲ್ಲಿ ಪ್ರತಿವಾದಿಗಳೇ ಸಾಲ ಪಡೆದುಕೊಂಡಿರುತ್ತಾರೆಂದು ನೊಟೀಸ್ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು 2 ನೇಪ್ರತಿವಾದಿ ತನಗೆ ಪ್ರತ್ಯುತ್ತರ ನೊಟೀಸ್ ಕೊಟ್ಟಿರುವ ದಾಖಲೆಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಪ್ರತ್ಯುತ್ತರ ನೊಟೀಸ್ ಅನ್ನು ನಿಡಿ-1 ಎಂದು ಗುರುತಿಸಲಾಯಿತು. 2 ನೇಪ್ರತಿವಾದಿ ನನ್ನ ಬಳಿ ಯಾವುದೇ ಸಾಲಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಗಂಡ ಶ್ರೀನಿವಾಸ್ ಬಿ ಜಿ ರವರು ಸಾಲ ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. 2 ನೇಪ್ರತಿವಾದಿ ಗಂಡನಾದ ಶ್ರೀನಿವಾಸ್ ಬಿ.ಜಿ.ರವರು ಬಂಗಾರಪೇಟೆಯ ರೈಲ್ವೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. 1 ನೇಪ್ರತಿವಾದಿ ಸಹ ಬಂಗಾರಪೇಟೆಯ ರೈಲ್ವೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ.

2. 1 ನೇಪ್ರತಿವಾದಿ ನನ್ನ ತಂದೆ ಬಳಿ ಹಣ ಲೇವಾದೇವಿ ಮಾಡುತ್ತಿರುವುದರಿಂದ ಪರಿಚಯ ಇರುತ್ತಾರೆ. 1 ನೇಪ್ರತಿವಾದಿಯು ಶ್ರೀನಿವಾಸ್ ಬಿ ಜಿ ರವರನ್ನು ಪರಿಚಯ ಮಾಡಿರುತ್ತಾರೆ. 1 ನೇಪ್ರತಿವಾದಿ ಕಮ್ಮಸಂದ್ರ ಮತ್ತು ಶ್ರೀನಿವಾಸ್ ಬಿ.ಜಿ. ಬಿಲ್ಲೇರಹಳ್ಳಿಯಲ್ಲಿ ವಾಸ ಇರುತ್ತಾರೆ. ನನ್ನ ಹಣಕಾಸಿನ ಲೇವಾದೇವಿಯ ರಿಶಬ್‌ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಕಚೇರಿ ಕೆ ಜಿ ಎಫ್ ಸರ್ಕಾರಿ ಆಸ್ಪತ್ರೆಯ ಮುಂದೆ ಇರುತ್ತದೆ. 1 ನೇಪ್ರತಿವಾದಿಯು ಶ್ರೀನಿವಾಸ್ ಬಿ ಜಿ ರವರನ್ನು ನನ್ನ ಸೊಸೈಟಿಗೆ ಸಾಲ ಪಡೆದು ಕೊಳ್ಳಲು ಕರೆದುಕೊಂಡು ಬಂದಿರುತ್ತಾರೆ. ಸದರಿ

ಶ್ರೀನಿವಾಸ್ ಬಿ ಜಿ ರವರಿಗೆ ರೈಲ್ವೆ ಇಲಾಖೆ ಯಿಂದ ವರ್ಗಾವಣೆ ಆಗಿರುವುದರಿಂದ ಮಾರ್ಚ 2014 ರಂದು ಸಾಲ ಬೇಕೆಂದು ಕೇಳಿರುತ್ತಾರೆ. ನನ್ನ ಮನೆಯಲ್ಲಿ ಹಣ ಇರುತ್ತದೆ. ನನ್ನ ಮನೆ ಮತ್ತು ಸೊಸೈಟಿ ಒಂದೇ ಕಟ್ಟಡದಲ್ಲಿರುತ್ತದೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಜೊತೆಗೆ ನಿಪಿ3 ರ ಕಾನೂನು ತಿಳುವಳಿಕೆ ಪತ್ರದಲ್ಲಿ ರಿಶಬ್ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಬಗ್ಗೆ ಎಲ್ಲಿಯೂ ಹೇಳಿರುವುದಿಲ್ಲ. ಸದರಿ ರಿಶಬ್ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಸಂಸ್ಥಾಪಕ ನಾನೇ ಆಗಿರುತ್ತೇನೆ.

3. ನಾನು ಸಾಲವನ್ನು ದಿಃ5.4.2014 ರಂದು ಕೊಟ್ಟಿರುತ್ತೇನೆ. ಸದರಿ ಸಾಲವನ್ನುಕೊಡುವಾಗ 1 ನೇಪ್ರತಿವಾದಿ ಮತ್ತು ಶ್ರೀನಿವಾಸ್ ಬಿ ಜಿ ಇರುತ್ತಾರೆ. ನನ್ನ ಸೊಸೈಟಿಯ ಹೆಸರಿನಲ್ಲಿ ನೋಂದಾಯಿತ ಪ್ರನೋಟ್ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಪ್ರನೋಟ್ ಅನ್ನು ವೈಯುಕ್ತಿಕವಾಗಿ ಕೊಟ್ಟಿರುತ್ತೇನೆ. ನಾನು ಲೇವಾದೇವಿಯಿಂದ ಹಣ ಬರಬೇಕೆಂದು ಸುಮಾರು 45 ದಾವೆಗಳನ್ನು ಕೆ ಜಿ ಎಫ್ ನ್ಯಾಯಾಲಯದಲ್ಲಿ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಹಣದ ಲೇವಾದೇವಿಯ ಲೈಸೆನ್ಸ ಇರುವುದಿಲ್ಲ. ನಾನು ಹಣ ಕೊಡುವ ಬಗ್ಗೆ ಅಕೌಂಟ್ ಸಹ ಇಟ್ಟಿರುವುದಿಲ್ಲ. ನಿಪಿ1 ಮತ್ತು 2 ನನ್ನ ಬಳಿ ಇರುತ್ತದೆ. ನಿಪಿ1 ಮತ್ತು 2 ರ ಅಕ್ಷರಗಳನ್ನು ಹಣ ಕೊಡುವಾಗ ನಾನೇ ಬರೆದಿರುತ್ತೇನೆ. ನಾನು 2014 ರಲ್ಲಿ ಹಣ ಕೊಡುವಾಗ ಹಣ ಇರುವ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿಯು ನಗದಾಗಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿಯು ಬಿ ಜಿ ಶ್ರೀನಿವಾಸ್ ರವರ ವಾಹನ ಚಾಲನಾ ಪರವಾನಗಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ವಾಹನ ಚಾಲನಾ ಪರವಾಗಿಯನ್ನು ನಿಡಿ2 ಎಂದು ಗುರುತಿಸಲಾಯಿತು. ನಾನು ಹೇಳಿದಂತೆ 1 ನೇಪ್ರತಿವಾದಿ ಮತ್ತು ಬಿ ಜಿ ಶ್ರೀನಿವಾಸ್ ರವರು ನನ್ನ ಬಳಿ ಬಂದು ಹಣ ಕೊಡುವಂತೆ ಕೇಳಿರುವುದಿಲ್ಲ ಮತ್ತು

ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹಾಲಿ ಪ್ರಕರಣವನ್ನು ಹಾಕಲು ನಿಪಿ1 ಮತ್ತು 2 ಅನ್ನು ಸೃಷ್ಟಿಮಾಡಿರುತ್ತೇನೆಂದರೆ ಸರಿಯಲ್ಲ.

4. ನಾನು ಒಎಸ ನಂ 324/2010 ರಂತೆ ಕುಬೇಂದ್ರನ್ ರವರ ಮೇಲೆ ಹಣಕ್ಕಾಗಿ ದಾವೆ ಹಾಕಿರುತ್ತೇನೆಂದರೆ ಸರಿ ಮತ್ತು ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಒಎಸ್ ನಂ 324/2010 ರ ನನ್ನ ಮುಖ್ಯ ವಿಚಾರಣೆ ಮತ್ತು ತೀರ್ಪನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿಡಿ-3 ಮತ್ತು ನಿಡಿ-4 ಎಂದು ಗುರುತಿಸಲಾಯಿತು. ನಾನು ಬೆಂಗಳೂರಿನಲ್ಲಿ ಇ ಎಕ್ಸ ನಂಬರ್ 15007/2005 ರಂತೆ ಮಹದೇವಯ್ಯ ರವರ ಮೇಲೆ ಹಣ ಬರಬೇಕೆಂದು ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಒಎಸ ನಂ 7065/2004 ರಂತೆ ಹಣ ಬರಬೇಕೆಂದು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಕೆ ಜಿ ಎಫ್ ನ್ಯಾಯಾಲಯದಲ್ಲಿ ಒಎಸ 582/2010 ರಂತೆ ದಾವೆಯನ್ನು ಹಾಕಿರುತ್ತೇನೆಂದರೆ ಸರಿ. ಸದರಿ ದಾವೆಯ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯನ್ನು ನೋಡಿ ಗುರ್ತಿಸಿರುತ್ತಾರೆ. ಅವುಗಳನ್ನು ನಿಡಿ5 ಮತ್ತು 6 ಎಂದು ಗುರುತಿಸಲಾಯಿತು. ನಾನು ಹಾಕಿರುವ ಲೇವಾದೇವಿ ವ್ಯವಹಾರಗಳು ದಾವೆಗಳು ಮತ್ತು ಜಾರಿ ಅರ್ಜಿಗಳು ಹಾಲಿ ಬಾಕಿ ಇರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಸಾಲ ಪಡೆದುಕೊಳ್ಳದೇ ಇದ್ದರೂ ಸಹ ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಸಾಲ ನೀಡಲು ಹಣದ ಲೇವಾದೇವಿ ಲೈಸನ್ಸ ಇಲ್ಲದೇ ವ್ಯವಹಾರದ ಮಾಡಿರುವುದು ಕಾನೂನಿಗೆ ವಿರುದ್ಧ ಎಂದರೆ ಸರಿಯಲ್ಲ. ನಾನು ಹಾಕಿರುವ ಕುಬೇಂದ್ರನ್ ರವರ ದಾವೆ ಮೇಲೆ ಅಪೀಲ್ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಬಿ ಜಿ ಶ್ರೀನಿವಾಸ್ ರವರ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ಗೊತ್ತಿಲ್ಲ. ಬಿ ಜಿ ಶ್ರೀನಿವಾಸ್ ರವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲದೇ ಇರುವುದರಿಂದ 2 ನೇಪ್ರತಿವಾದಿ ಮೇಲೆ ದಾವೆ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಂದ ಹಣ ವಸೂಲಿ

ಮಾಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ಮತ್ತು 2 ರ ದಾಖಲೆಗಳಲ್ಲಿರುವ ಸಹಿಗಳು 1 ನೇಪ್ರತಿವಾದಿ ಮತ್ತು ಬಿ ಜಿ ಶ್ರೀನಿವಾಸ್ ರವರು ಮಾಡಿರುವುದಿಲ್ಲ ಮತ್ತು ಸಹಿಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.